HOSADIGANTHA / HUBBALLI
ಹೊಸದಿಗಂತ / ಹುಬ್ಬಳ್ಳಿ

19 MAY 2019

(1)

# ಕಾಶ್ಮೀರ ಕಣಿವೆಯಲ್ಲಿ ರೈಲು ಸೇವೆ ಸ್ಥಗಿತ

**ಶ್ರೀನಗರ:** ನಾಗರಿಕರು ಮತ್ತು ಉಗ್ರರ ಹತ್ಯೆಯನ್ನು ಖಂಡಿಸಿ ಪ್ರತ್ಯೇಕತಾವಾದಿಗಳು ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಿರುವ ಹಿನ್ನೆಲೆಯಲ್ಲಿ ಕಾಶ್ಮೀರ ಕಣಿವೆಯಲ್ಲಿ ಶುಕ್ರವಾರ ಭದ್ರತಾ ಕಾರಣಗಳಿಗಾಗಿ ರೈಲು ಸೇವೆಯನ್ನು ಸ್ಥಗಿತಗೊಳಿಸಲಾಯಿತು.

ಗುರುವಾರ ಸಂಜೆ ಪೊಲೀಸರು ನೀಡಿದ ಸಲಹೆಯಂತೆ ಕಾಶ್ಮೀರ ಕಣಿವೆಯಲ್ಲಿ ರೈಲು ಸೇವೆಯನ್ನು ಸ್ಥಗಿತಗೊಳಿಸಲಾಗಿದೆ ಎಂದು ರೈಲ್ವೆ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ದಕ್ಷಿಣ ಕಾಶ್ಮೀರದ ಬದ್ಗಾಮ್-ಶ್ರೀನಗರ-ಅನಂತ್‌ನಾಗ್-ಖಾಜಿಗುಂದ್‌ನಿಂದ ಜಮ್ಮು ಪ್ರಾಂತ್ಯದ ಬನಿಹಾಲ್‌ಗೆ ಯಾವುದೇ ರೈಲು ಸಂಚರಿಸುವುದಿಲ್ಲ ಎಂದು ಅವರು ತಿಳಿಸಿದರು.

ಅದೇ ರೀತಿ ದಕ್ಷಿಣ ಕಾಶ್ಮೀರದ ಶ್ರೀನಗರ-ಬದ್ಗಾಮ್ ಮತ್ತು ಬಾರಾಮುಲ್ಲಾಗೆ ರೈಲು ಹೊರಡುವುದಿಲ್ಲ ಎಂದು ಅವರು ಮಾಹಿತಿ ನೀಡಿದರು.

ಪ್ರಯಾಣಿಕರ ಸುರಕ್ಷತೆ, ರೈಲ್ವೆ ಆಸ್ತಿಗಳ ರಕ್ಷಣೆ ದೃಷ್ಟಿಯಿಂದ ಸ್ಥಳೀಯ ಆಡಳಿತ ಅದರಲ್ಲೂ ಪೊಲೀಸರು ನೀಡುವ ಸಲಹೆಯನ್ನು ರೈಲ್ವೆ ಇಲಾಖೆ ಪಾಲಿಸುತ್ತದೆ. ಈ ಹಿಂದೆ ನಡೆದ ಮುಷ್ಕರ, ಪ್ರತಿಭಟನೆಯ ವೇಳೆ ರೈಲ್ವೆ ಆಸ್ತಿಗೆ ಸಾಕಷ್ಟು ಹಾನಿಯಾಗಿತ್ತು.

**Train Service remained suspended for the second day on Saturday for security reasons in the South Kashmir in view of general strike called by separatists against the civilian and militant's killings during the Holy month of Ramadhan. However, train service was resumed on Srinagar Bdgam- Baramulla track in north Kashmir after remaining suspended on Friday .**

Scanned by CamScanner